ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು).— ಅಧ್ಯಕ್ಷರೇ

೧) ಸಭೆಯ ಮುಂದಿಡಲಾದ ಕಾಗದ ಪತ್ರಗಳು :

ಅ) ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿ) ಅವರ ಹೆಸರಿನ ಮಂದಿರವ. ೧೯೬೪ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಶಾಸನದ ೨೦ನೇ ಕಲಮಿನ ಮೇರೆಗೆ.—

ಆ) ಸಂಚಾರಿ ಚಿತ್ರವಂದಿರವನ್ನು ಅರೆ ಖಾಯಂ ಚಿತ್ರ ಮಂದಿರವನ್ನಾಗಿ ಪರಿವರ್ತಿಸಲು ಅರ್ಜಿ ಸಲ್ಲಿಸಲು ಆಗಿರುವ ವಿಳಂಬವನ್ನು ವಿನಾಯಿತಿ ಮಾಡುವ ಬಗ್ಗೆ ದಿನಾಂಕ ೨೩–೨–೧೯೮೮ ರಂದು ಹೊರಡಿಸಲಾದ ಎಚ್.ಡಿ. ೨೭ ಸಿ.ಎನ್.ಎ. ೧೯೮೮ನೇ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಆ) ಶ್ರೀ ನಾರಾಯಣಪ್ಪ, ಮಾಲೀಕರು ಶ್ರೀ ವಂಹಾತ್ಮ ಟೂರಿಂಗ್ ಟಾಕೀಸ್, ಕಾನಸವಾಡಿ ದೊಡ್ಡಬಳ್ಳಾಪುರ ತಾಲ್ಲೂಕು ಇವರು ಫಾರಂ ಎ.ಎ. ಅನ್ನು ಕೊಡಲು ವಿಳಂಬವಾಗಿರುವ ಒಂದು ತಿಂಗಳು ಎರಡು ದಿನವನ್ನು ವಿನಾಯಿತಿ ಮಾಡುವ ಬಗ್ಗೆ ದಿನಾಂಕ ೨೩–೨–೧೯೮೮ರಂದು ಹೊರಡಿಸಲಾದ ಎಚ್.ಡಿ. ೨೪೩ ಎನ್ ಎ. ೧೯೮೮ನೇ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಇ) ರಾಷ್ಟ್ರಕವಿ ಶ್ರೀ ಕುವೆಂಪುರವರ ಕಥೆ ಆಧಾರಿತ 'ಬೆರಳ್‌ಗೆ ಕೊರಳ್' ವರ್ಣ ಚಲನಚಿತ್ರವನ್ನು ಚನ್ನಪಟ್ಟಣದಲ್ಲಿ ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಎರಡು ರೂಪಾಯಿ ಶುಲ್ಕದ ಮೇಲೆ ಪ್ರದರ್ಶಿಸುವ ಬಗ್ಗೆ ದಿನಾಂಕ ೧–೨–೧೯೮೮ರಂದು ಹೊರಡಿಸಲಾದ ಎಚ್.ಡಿ. ೧೦ ಸಿ.ಎನ್.ಎ. ೧೯೮೮ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು).—

ಆ) ಶ್ರೀ ಎಚ್. ವಿಕಾಂತಯ್ಯ (ಸಹಕಾರ ಮಂತ್ರಿ ಅವರ ಪರವಾಗಿ) ೧೯೬೧ನೇ ಇಸವಿಯ ಕರ್ನಾಟಕ ಪಾನ್ ಬ್ರೋಕರ್ಸ್ ಶಾಸನದ ೧೩ನೇ ಕಲಮಿನ ಮೇರೆಗೆ.—

ಅ) ೧೯೮೮ನೇ ಇಸವಿಯ ಕರ್ನಾಟಕ ಪಾನ್ ಬ್ರೋಕರ್ಸ್ (ತಿದ್ದುಪಡಿ) ನಿಯಮಕ್ಕೆ ಸಂಬಂಧಿಸಿದಂತೆ ದಿನಾಂಕ ೧೬ನೇ ಮಾರ್ಚ್ ೧೯೮೮ ರಂದು ಹೊರಡಿಸಲಾದ ಸಿ.ಎಂ.ಡಬ್ಲ್ಯೂ. ೨ ಸಿ.ಎಂ.ಎಲ್. ೧೯೮೮ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಆ) ೧೯೮೮ನೇ ಇಸವಿಯ ಕರ್ನಾಟಕ ಲೇವಾ ದೇವಿಗಾರರ (ತಿದ್ದುಪಡಿ) ನಿಯಮಕ್ಕೆ ಸಂಬಂಧಿಸಿದಂತೆ ದಿನಾಂಕ ೧೦–೩–೧೯೮೮ ರಂದು ಹೊರಡಿಸಲಾದ ಸಿ.ಎಂ.ಡಬ್ಲ್ಯೂ. ೧ ಸಿ.ಎಂ.ಎಲ್ ೧೯೮೮ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಅರ್ಜಿಯನ್ನೊಪ್ಪಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಅಧ್ಯಕ್ಷರೇ, ಮಲಪ್ರಭಾ ನದಿಯಿಂದ, ಪಕ್ಕದ ಹಳ್ಳಿಗಳಾದ ಕದ್ರೊಳ್ಳಿ, ಹುಣಸೀಕಟ್ಟಿ, ದಾಸ್ತಿಕೊಪ್ಪ, ಮುಗುಟಾಖಾನಹುಬ್ಬಳ್ಳಿ, ರೈತರು ನೀರನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರದ ಪರವಾನಗಿಯನ್ನು ಪಡೆಯುವ ಅರ್ಜಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು.—ಒಪ್ಪಿಸಲಾಯಿತು.

ವರದಿಯನ್ನೊಪ್ಪಿಸುವುದು

ಶ್ರೀ ಬಿ. ಜಿ. ಕೊಟ್ರಪ್ಪ (ಅಧ್ಯಕ್ಷರು, ವಿಧಾನ ಸಭೆಯ ಭರವಸೆಗಳ ಸಮಿತಿ).—ಅಧ್ಯಕ್ಷರೇ, ವಿಧಾನ ಸಭೆಯ ಸರ್ಕಾರೀ ಭರವಸೆಗಳ ಸಮಿತಿಯ ನಾಲ್ಕನೆ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.